



ಲೋಟಸ್ ಸ್ತೂಪ



ಭಾರತದ ಬೌದ್ಧ ದೇಗುಲದ ಪ್ರವೇಶ ದ್ವಾರದಲ್ಲಿರುವ ಬೃಹತ್ ಕಂಚಿನ ಗಂಟೆ



ವಿಶ್ವ ಶಾಂತಿ ಸ್ತೂಪ

**ಬುದ್ಧ ಜನಿಸಿದ ಲುಂಬಿನಿಯಲ್ಲಿ ಮಗನ ಹುಟ್ಟುಹಬ್ಬವನ್ನು ಆಚರಿಸಬೇಕೆಂಬ ನಮ್ಮ ಕನಸು ಕೊನೆಗೂ ಈಡೇರಿತು.**

ಚಿತ್ರ –ಲೇಖನ:
**ಚೈತ್ರಾ ಅರ್ಜುನಪುರಿ**

ಹುಟ್ಟುಹಬ್ಬದ ದಿನ ನಾವು ಕಾರಿನಲ್ಲಿ ಭೈರಹವಾ ತಲುಪಿದೆವು.

### ಲುಂಬಿನಿ ವನ

ಹೋಟೆಲಿನಲ್ಲಿ ಲಗೇಜ್ ಇರಿಸಿ, ಊಟ ಮಾಡಿ, ರಾತ್ರಿಗೆ ಕೇಕ್ ಆರ್ಡರ್ ನೀಡಿ, ಅಲ್ಲಿಂದ 30 ಕಿಮೀ ದೂರದಲ್ಲಿರುವ ಲುಂಬಿನಿ ತಲುಪಿದಾಗ ಮಧ್ಯಾಹ್ನ ಎರಡು ಗಂಟೆ. ನಿಜವಾಗಲೂ ಈ ಪ್ರದೇಶ ಒಂದಾನೊಂದು ಕಾಲದಲ್ಲಿ ಅರಣ್ಯವಾಗಿತ್ತೆ ಎಂದು ಅನುಮಾನ ಬರುವಂಥ ವಾತಾವರಣ ಅಲ್ಲಿನದು! ಕಾದ ಬಿಸಿಲಿನಲ್ಲಿ ಕಾರನ್ನು ಮರದಡಿ ನಿಲ್ಲಿಸಿ ಮಾಯಾದೇವಿಯ ದೇವಸ್ಥಾನಕ್ಕೆ ಹೊರಡಬೇಕೆನ್ನುವಷ್ಟರಲ್ಲಿ ಅಲ್ಲಿಯ ಡಿವೈಎಸ್ಪಿ ನಮ್ಮ ಬಳಿಗೆ ಬಂದರು. ದೇಶದೆಲ್ಲೆಡೆ ಗಲಾಟೆಯಿರುವಾಗ ಕಠ್ಮಂಡು ರಿಜಿಸ್ಟ್ರೇಶನ್ ಇರುವ ಕಾರೊಂದು ಲುಂಬಿನಿ ತಲುಪಿರುವುದು ನೋಡಿ ಅವರು ಅಚ್ಚರಿ ವ್ಯಕ್ತಪಡಿಸಿದರು.

ಪೊಲೀಸ್ ಅಧಿಕಾರಿಯ ಅಚ್ಚರಿಗೆ ಬೇರೆ ಕಾರಣವೂ ಇತ್ತು. ಭೈರಹವಾ–ದಿಂದ 10 ಕಿಮೀ ದೂರದಲ್ಲಿ ಕುಪಿತ ಹಳ್ಳಿಯ ಜನರು ಕಾರೊಂದಕ್ಕೆ ಬೆಂಕಿ ಹಚ್ಚಿ ಸುಟ್ಟು ಹಾಕಿದ್ದರು. ನಾವು ಅದೇ ಮಾರ್ಗದಲ್ಲಿ ಬರುವಾಗ, ರಸ್ತೆಗಳು ನಿರ್ಜನವಾಗಿದ್ದವು. ಎಲ್ಲೆಲ್ಲೂ ಪೊಲೀಸ್ ವಾಹನಗಳು, ಲಾಠಿ ಹಿಡಿದ ಪೊಲೀಸರು. ಒಂದೆಡೆ ಪೊಲೀಸರು ನಮ್ಮ ಕಾರನ್ನು ತಡೆದು, ಎಲ್ಲಿಯವರೆಂದು ವಿಚಾರಿಸಿ ಬೇರೆ ಮಾರ್ಗವಾಗಿ ಭೈರಹವಾ ತಲುಪುವಂತೆ ದಾರಿ ತೋರಿಸಿದ್ದರು.

ಸುಮಾರು 35–40 ಕಿಮೀ ಸುತ್ತಿ ಬಳಸಿ ಭೈರಹವಾ ತಲುಪಿದ್ದ ನಮ್ಮ ಕಥೆ ಕೇಳಿ ಆ ಪೊಲೀಸ್ ಅಧಿಕಾರಿ, ಕೈಯಲ್ಲಿದ್ದ ಪುಟ್ಟ ಮಗುವನ್ನು ನೋಡಿ, ದೇವ–ಸ್ಥಾನದ ಬಳಿಗೇ ಕಾರು ತೆಗೆದುಕೊಂಡು ಹೋಗಲು ಅನುಮತಿ ನೀಡಿದರು.

### ಮಾಯಾದೇವಿ ದೇವಸ್ಥಾನ:

ಮೊದಲಿಗೆ ಸಾಕ್ಯಮುನಿಯ ತಾಯಿ ಮಾಯಾದೇವಿಯ ದೇವಸ್ಥಾನದ ಕಡೆಗೆ ಹೊರಟೆವು. ಸುಮಾರು 4 ಕಿಮೀ ಅಗಲ ಮತ್ತು 2.5 ಕಿಮೀ ಉದ್ದ–